# ಹಡಗು ಸಾಗಣೆ ಅಭಿವೃದ್ಧಿ ನಿಧಿ ಸಮಿತಿ (ರದ್ದಿಯಾತಿ) ಅಧಿನಿಯಮ, 1986

**(1986ರ ಅಧಿನಿಯಮ ಸಂಖ್ಯೆ 66)**

**[17-9-2001ರ ಭಾರತ ರಾಜಪತ್ರದ IX ನೇ ಭಾಗದ, 1ನೇ ವಿಭಾಗದ, 20ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 53 ರಿಂದ 58 ರ ವರೆಗಿನ ಪುಟಗಳಲ್ಲಿ ಪ್ರಕಟಿತ]**

**ಪ್ರಕರಣಗಳ ಅನುಕ್ರಮಣಿಕೆ**

**ಪ್ರಕರಣಗಳು:**

**ಅಧ್ಯಾಯ-I**

**ಪ್ರಾರಂಭಿಕ**

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು

**ಅಧ್ಯಾಯ-II**

**ಹಡಗು ಸಾಗಣೆ ಅಭಿವೃದ್ಧಿ ನಿಧಿ ಸಮಿತಿಯ ರದ್ದಿಯಾತಿ ಮತ್ತು ಕೇಂದ್ರ ಸರ್ಕಾರದಲ್ಲಿ ಸಮಿತಿಯ ಆಸ್ತಿಗಳನ್ನು ಮತ್ತು ಹೊಣೆಗಳನ್ನು ನಿಹಿತಗೊಳಿಸುವುದು**

3. ಹಡಗು ಸಾಗಣೆ ಅಭಿವೃದ್ಧಿ ನಿಧಿ ಸಮಿತಿಯ ರದ್ದಿಯಾತಿ ಮತ್ತು ಅಧಿನಿಯಮದಲ್ಲಿ ಆನುಷಂಗಿಕ ತಿದ್ದುಪಡಿಗಳು
4. ಆನುಷಂಗಿಕ ಉಪಬಂಧಗಳು
5. ಕೇಂದ್ರ ಸರ್ಕಾರದ ವಿರುದ್ಧ ಇರುವ ದಾವೆಗಳು, ಮುಂತಾದವುಗಳ ಮುಂದುವರಿಕೆ
6. ಸಮಿತಿಯ ಹಣ, ಮುಂತಾದವುಗಳನ್ನು ಭಾರತದ ಸಂಚಿತ ನಿಧಿಗೆ ಜಮೆ ಮಾಡುವುದು
7. ಸಮಿತಿಯ ಹಾಲಿ ಇರುವ ನೌಕರರ ಸೇವೆಗಳ ವರ್ಗಾವಣೆ

**ಅಧ್ಯಾಯ-III**

**ಕೇಂದ್ರ ಸರ್ಕಾರದ ವಿಶೇಷ ಅಧಿಕಾರಗಳು**

8. ಒಪ್ಪಂದದ ಅವಧಿಗೆ ಮುಂಚೆ ಮರುಸಂದಾಯ ಮಾಡುವಂತೆ ಕೇಳಲು ಕೇಂದ್ರ ಸರ್ಕಾರದ ಅಧಿಕಾರ
9. ನ್ಯಾಯಾಲಯದ ಮಧ್ಯಪ್ರವೇಶವಿಲ್ಲದೆ ರಿಸೀವರನ ನೇಮಕ
10. ನಿರ್ದೇಶಕರ ಮತ್ತು ಆಡಳಿತಗಾರರ ನೇಮಕ
11. ಅಧಿಸೂಚಿತ ಆದೇಶದ ಪರಿಣಾಮ
12. ನಿರ್ದೇಶಕರ ಮತ್ತು ಆಡಳಿತಗಾರರ ಅಧಿಕಾರಗಳು ಮತ್ತು ಕರ್ತವ್ಯಗಳು

13. ವ್ಯವಸ್ಥಾಪನಾ ಕರಾರು ಮುಂತಾದವುಗಳನ್ನು ಕೊನೆಗೊಳಿಸಿದ್ದಕ್ಕಾಗಿ ನಷ್ಟ ಪರಿಹಾರದ ಹಕ್ಕು ಇರುವುದಿಲ್ಲ
14. 1956ರ 1ನೇ ಅಧಿನಿಯಮದ ಅನ್ವಯ
15. ಬಾಕಿಗಳನ್ನು ಭೂಕಂದಾಯದ ಬಾಕಿಯಂತೆ ವಸೂಲಿ ಮಾಡುವುದು
16. ಹೆಸರಿಸಲಾದ ವ್ಯಕ್ತಿಗೆ ಅಧಿಕಾರಗಳ ಪ್ರತ್ಯಾಯೋಜನೆ

## ಅಧ್ಯಾಯ-VI

### ಸಂಕೀರ್ಣ

17. ಇತರೆ ಕಾನೂನುಗಳ ಮೇಲೆ ಅಧಿನಿಯಮದ ಪರಿಣಾಮ
18. ಸದ್ಭಾವನೆಯಿಂದ ತೆಗೆದುಕೊಂಡ ಕ್ರಮದ ಸಂರಕ್ಷಣೆ
19. ನಿರ್ದೇಶಕರು, ಮುಂತಾದವರಿಗೆ ನಷ್ಟ ಭರ್ತಿ
20. ನಿರ್ದೇಶಕರು, ಮುಂತಾದವರು ಲೋಕ ನೌಕರರಾಗಿರುವುದು

# ಹಡಗು ಸಾಗಣೆ ಅಭಿವೃದ್ಧಿ ನಿಧಿ ಸಮಿತಿ (ರದ್ದಿಯಾತಿ) ಅಧಿನಿಯಮ, 1986

**(1986ರ ಅಧಿನಿಯಮ ಸಂಖ್ಯೆ 66)**

[24ನೇ ಡಿಸೆಂಬರ್ 1986]

ವ್ಯಾಪಾರಿ ಹಡಗು ಸಾಗಣೆ ಅಧಿನಿಯಮ, 1958ರ ಮೇರೆಗೆ ರಚಿಸಲಾದ ಹಡಗು ಸಾಗಣೆ ಅಭಿವೃದ್ಧಿ ನಿಧಿ ಸಮಿತಿಯನ್ನು ರದ್ದುಗೊಳಿಸುವ ಮತ್ತು ಅದಕ್ಕೆ ಪ್ರಾಸಂಗಿಕವಾದ ಕೆಲವು ವಿಷಯಗಳ ಬಗ್ಗೆ ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಮೂವತ್ತೇಳನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು :-

## ಅಧ್ಯಾಯ-I

### ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಹಡಗು ಸಾಗಣೆ ಅಭಿವೃದ್ಧಿ ನಿಧಿ ಸಮಿತಿ (ರದ್ದಿಯಾತಿ) ಅಧಿನಿಯಮ, 1986 ಎಂದು ಕರೆಯತಕ್ಕುದು.

(2) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆ ಮೂಲಕ ಗೊತ್ತುಪಡಿಸಬಹುದಾದ ದಿನಾಂಕದಂದು ಜಾರಿಗೆ ಬರತಕ್ಕುದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಅಧಿನಿಯಮ" ಎಂದರೆ ವ್ಯಾಪಾರಿ ಹಡಗು ಸಾಗಣೆ ಅಧಿನಿಯಮ, 1958;

(ಬಿ) "ಗೊತ್ತುಪಡಿಸಲಾದ ದಿನ" ಎಂದರೆ ಈ ಅಧಿನಿಯಮದ ಪ್ರಾರಂಭದ ದಿನಾಂಕ;

(ಸಿ) "ಸಮಿತಿ" ಎಂದರೆ ಅಧಿನಿಯಮದ 15ನೇ ಪ್ರಕರಣದ ಮೇರೆಗೆ ರಚಿತವಾದ ಹಡಗು ಸಾಗಣೆ ಅಭಿವೃದ್ಧಿ ನಿಧಿ ಸಮಿತಿ;

(ಡಿ) "ಹೆಸರಿಸಲಾದ ವ್ಯಕ್ತಿ" ಎಂದರೆ ಈ ಅಧಿನಿಯಮದ 16ನೇ ಪ್ರಕರಣದ ಮೇರೆಗೆ ನೇಮಕ ಮಾಡಲಾದ ವ್ಯಕ್ತಿ;

(ಇ) "ನಿಧಿ" ಎಂದರೆ ಅಧಿನಿಯಮದ 14ನೇ ಪ್ರಕರಣದ ಮೇರೆಗೆ ರಚಿಸಿದ ಹಡಗು ಸಾಗಣೆ ಅಭಿವೃದ್ಧಿ ನಿಧಿ;

(ಎಫ್) "ಅಧಿಸೂಚಿತ ಆದೇಶ" ಎಂದರೆ ರಾಜಪತ್ರದಲ್ಲಿ ಅಧಿಸೂಚಿಸಲಾದ ಆದೇಶ;

(ಜಿ) "ಹಡಗಿನ ಒಡೆಯ" ಎಂದರೆ ಈ ಅಧಿನಿಯಮದ 21ನೇ ಪ್ರಕರಣದಲ್ಲಿ ವಿವರಿಸಲಾಗಿರುವ ವ್ಯಕ್ತಿಯಿಂದ ಅಥವಾ ಸಮಿತಿಯಿಂದ ಸಾಲಗಳನ್ನು ಅಥವಾ ಇತರ ರೀತಿಯಲ್ಲಿ ಆರ್ಥಿಕ ಸಹಾಯವನ್ನು ಪಡೆದಿದ್ದ ವ್ಯಕ್ತಿ;

(ಹೆಚ್) "ಹಡಗು ಸಾಗಣೆ ವ್ಯಾಪಾರ ಸಂಸ್ಥೆ" ಎಂದರೆ ಹಡಗಿನ ಒಡೆಯನ ಒಡೆತನದಲ್ಲಿ, ನಿಯಂತ್ರಣದಲ್ಲಿ ಅಥವಾ ವ್ಯವಸ್ಥಾಪನೆಯಲ್ಲಿ ಇರುವ ಮತ್ತು ಹಡಗು ಸಾಗಣೆ ವ್ಯವಹಾರದಲ್ಲಿ ತೊಡಗಿರುವ ಯಾವುದೇ ವ್ಯಾಪಾರ ಸಂಸ್ಥೆ.

## ಅಧ್ಯಾಯ-II

**ಹಡಗು ಸಾಗಣೆ ಅಭಿವೃದ್ಧಿ ನಿಧಿ ಸಮಿತಿಯ ರದ್ದಿಯಾತಿ ಮತ್ತು ಕೇಂದ್ರ ಸರ್ಕಾರದಲ್ಲಿ ಸಮಿತಿಯ ಆಸ್ತಿಗಳನ್ನು ಮತ್ತು ಹೊಣೆಗಳನ್ನು ನಿಹಿತಗೊಳಿಸುವುದು.**

**3. ಹಡಗು ಸಾಗಣೆ ಅಭಿವೃದ್ಧಿ ನಿಧಿ ಸಮಿತಿಯ ರದ್ದಿಯಾತಿ ಮತ್ತು ವ್ಯಾಪಾರಿ ಹಡಗು ಸಾಗಣೆ ಅಧಿನಿಯಮ, 1958ರಲ್ಲಿ ಆನುಷಂಗಿಕ ತಿದ್ದುಪಡಿಗಳು.–** ಗೊತ್ತುಪಡಿಸಲಾದ ದಿನದಂದು ಮತ್ತು ಆ ದಿನದಿಂದ, ವ್ಯಾಪಾರಿ ಹಡಗು ಸಾಗಣೆ ಅಧಿನಿಯಮ, 1958ರ 15ನೇ ಪ್ರಕರಣದ ಮೇರೆಗೆ ರಚಿಸಲಾದ ಹಡಗು ಸಾಗಣೆ ನಿಧಿ ಸಮಿತಿಯು ರದ್ದುಗೊಳ್ಳತಕ್ಕುದು, ಮತ್ತು ತದನುಸಾರವಾಗಿ ಆ ಅಧಿನಿಯಮವು ಈ ಕೆಳಕಂಡಂತೆ ತಿದ್ದುಪಡಿಯಾಗತಕ್ಕುದು:–

(ಎ) ದೀರ್ಘ ಶೀರ್ಷಿಕೆಯಲ್ಲಿ, "ಮತ್ತು ಹಡಗು ಸಾಗಣೆ ಅಭಿವೃದ್ಧಿ ನಿಧಿ" ಎಂಬ ಪದಗಳನ್ನು ಬಿಟ್ಟುಬಿಡತಕ್ಕುದು.

(ಬಿ) IVನೇ ಭಾಗವನ್ನು ಬಿಟ್ಟುಬಿಡತಕ್ಕುದು

**4. ಆನುಷಂಗಿಕ ಉಪಬಂಧಗಳು.–** ಸಮಿತಿಯನ್ನು ರದ್ದುಪಡಿಸಿದ ತರುವಾಯ,–

(ಎ) ಆ ಸಮಿತಿಯ ಎಲ್ಲಾ ಹಕ್ಕುಗಳು ಮತ್ತು ವಿಶೇಷಾಧಿಕಾರಗಳು ಕೇಂದ್ರ ಸರ್ಕಾರದ ಹಕ್ಕುಗಳಾಗತಕ್ಕುದು ಮತ್ತು ವಿಶೇಷಾಧಿಕಾರಗಳಾಗತಕ್ಕುದು;

(ಬಿ) ಸಮಿತಿಯ ಜಮೆಯಲ್ಲಿರುವ ನಗದು ಶಿಲ್ಕುಗಳು, ಮೀಸಲು ನಿಧಿಗಳು, ಲಿಖಿತಗಳು ಮತ್ತು ಹಣಗಳು ಸೇರಿದಂತೆ ಎಲ್ಲ ಚರ ಮತ್ತು ಸ್ಥಿರ ಆಸ್ತಿಗಳು ಮತ್ತು ಆ ಸಮಿತಿಯ ಒಡೆತನದಲ್ಲಿ, ಸ್ವಾಧೀನದಲ್ಲಿ, ಅಧಿಕಾರದಲ್ಲಿ ಅಥವಾ ನಿಯಂತ್ರಣದಲ್ಲಿ ಗೊತ್ತುಪಡಿಸಲಾದ ದಿವಸಕ್ಕಿಂತ ನಿಕಟಪೂರ್ವದಲ್ಲಿದ್ದಂಥ ಸ್ವತ್ತುಗಳಲ್ಲಿನ ಅಥವಾ ಅವುಗಳಿಂದ ಉದ್ಭವಿಸುವ ಎಲ್ಲ ಹಕ್ಕುಗಳು ಮತ್ತು ಹಿತಾಸಕ್ತಿಗಳು ಮತ್ತು ಎಲ್ಲ ಲೆಕ್ಕಪುಸ್ತಕಗಳು, ರಿಜಿಸ್ಟರುಗಳು, ದಾಖಲೆಗಳು ಮತ್ತು ಅವುಗಳಿಗೆ ಸಂಬಂಧಿಸಿದ ಯಾವುದೇ ಸ್ವರೂಪದ ಎಲ್ಲ ಇತರೆ ದಸ್ತಾವೇಜುಗಳು ಕೇಂದ್ರ ಸರ್ಕಾರದಲ್ಲಿ ನಿಹಿತವಾಗತಕ್ಕುದು;

(ಸಿ) ಗೊತ್ತುಪಡಿಸಲಾದ ದಿನಕ್ಕೆ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿರುವ ಸಮಿತಿಯ ಯಾವುದೇ ವಿಧವಾದ ಎಲ್ಲ ಸಾಲಗಳು, ಹೊಣೆಗಳು ಮತ್ತು ಬಾಧ್ಯತೆಗಳು ಅಂಥ ದಿನದಂದು ಮತ್ತು ಆ ದಿನದಿಂದ ಸಂದರ್ಭಾನುಸಾರ ಕೇಂದ್ರ ಸರ್ಕಾರದ ಸಾಲಗಳು, ಹೊಣೆಗಳು ಮತ್ತು ಬಾಧ್ಯತೆಗಳಾಗಿರುವುವೆಂದು ಭಾವಿಸತಕ್ಕುದು; ಮತ್ತು

(ಡಿ) ಗೊತ್ತುಪಡಿಸಲಾದ ದಿನಕ್ಕೆ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿರುವಂಥ ಮತ್ತು ಸಮಿತಿಯ ಮೂಲಕ, ಅದರೊಂದಿಗೆ ಅಥವಾ ಅದಕ್ಕಾಗಿ ಮಾಡಿಕೊಳ್ಳಲಾಗಿರುವ ಎಲ್ಲ ಕರಾರುಗಳು ಮತ್ತು ಮಾಡುವುದಾಗಿ ವಾಗ್ದಾನ ಮಾಡಲಾಗಿರುವ ಎಲ್ಲ ವಿಷಯಗಳು ಮತ್ತು ಕಾರ್ಯಗಳು ಅಂಥ ದಿನದಂದು ಮತ್ತು ಆ ದಿನದಿಂದ ಕೇಂದ್ರ ಸರ್ಕಾರದ ಮೂಲಕ, ಅದರೊಂದಿಗೆ ಅಥವಾ ಅದಕ್ಕಾಗಿ ಮಾಡಿಕೊಂಡಿರುವುದಾಗಿ ಅಥವಾ ಮಾಡಲು ವಾಗ್ದಾನ ಮಾಡಿರುವುದಾಗಿ ಭಾವಿಸತಕ್ಕುದು.

**5. ಕೇಂದ್ರ ಸರ್ಕಾರದ ವಿರುದ್ಧ ಇರುವ ದಾವೆಗಳು, ಮುಂತಾದವುಗಳ ಮುಂದುವರಿಕೆ.–** (1) ನಿಧಿಯ ಅಥವಾ ಸಮಿತಿಯ ಸಂಬಂಧದಲ್ಲಿ ಗೊತ್ತುಪಡಿಸಲಾದ ದಿನದಂದು ಯಾವುದೇ ಸ್ವರೂಪದ ಯಾವುದೇ

ದಾವೆಯು, ಅಪೀಲು ಅಥವಾ ಇತರ ವ್ಯವಹರಣೆಯು ಅಂಥ ಸಮಿತಿಯ ಮೂಲಕ ಅಥವಾ ಅದರ ವಿರುದ್ಧ ಇತ್ಯರ್ಥದಲ್ಲಿದ್ದರೆ, ಆ ಸಮಿತಿಯ ರದ್ದಿಯಾತಿಯ ಕಾರಣದಿಂದ ಅದು ಕೊನೆಗೊಳ್ಳತಕ್ಕುದಲ್ಲ, ಅದನ್ನು ಮುಂದುವರಿಸದೆ ಇರತಕ್ಕುದಲ್ಲ ಅಥವಾ ಯಾವುದೇ ರೀತಿಯಲ್ಲಿ ಅದರ ಮೇಲೆ ಪ್ರತಿಕೂಲ ಪರಿಣಾಮವನ್ನುಂಟುಮಾಡತಕ್ಕುದಲ್ಲ; ಆದರೆ ಕೇಂದ್ರ ಸರ್ಕಾರದ ಮೂಲಕ ಅಥವಾ ಅದರ ವಿರುದ್ಧ ಅಂಥ ದಾವೆಯನ್ನು, ಅಪೀಲನ್ನು ಅಥವಾ ಇತರ ವ್ಯವಹರಣೆಯನ್ನು ಮುಂದುವರೆಸಬಹುದು, ಪ್ರಾಸಿಕ್ಯೂಟ್ ಮಾಡಬಹುದು ಮತ್ತು ಜಾರಿಗೊಳಿಸಬಹುದು.

(2) ಗೊತ್ತುಪಡಿಸಲಾದ ದಿನಕ್ಕೆ ಮುಂಚೆ ಆ ಸಮಿತಿಯ ಪರವಾಗಿ ಅಥವಾ ಅದರ ವಿರುದ್ಧ ಯಾವುದೇ ದಾವೆಯ ಅಥವಾ ವ್ಯವಹರಣೆ ಬಗ್ಗೆ ಯಾವುದೇ ವ್ಯಾಜ್ಯ ಕಾರಣವು ಅಥವಾ ಅಪೀಲು ಮಾಡುವ ಯಾವುದೇ ಹಕ್ಕು ಉದ್ಭವಿಸದಿರುವಲ್ಲಿ ಮತ್ತು ಗೊತ್ತುಪಡಿಸಲಾದ ದಿನದಂದು ಅಂಥ ವ್ಯಾಜ್ಯಕಾರಣದ ಮೇಲೆ ಯಾವುದೇ ದಾವೆಯನ್ನು ಅಥವಾ ವ್ಯವಹರಣೆಯನ್ನು ಹೂಡಲು ಅಥವಾ ಅಂಥ ಅಪೀಲನ್ನು ದಾಖಲು ಮಾಡಲು ಕಾಲ ಮೀರಿಲ್ಲದಿರುವಲ್ಲಿ, ಕೇಂದ್ರ ಸರ್ಕಾರದ ಮೂಲಕ ಅಥವಾ ಅದರ ವಿರುದ್ಧ ಅಂಥ ದಾವೆಯನ್ನು ಅಥವಾ ವ್ಯವಹರಣೆಯನ್ನು ಹೂಡಬಹುದು ಅಥವಾ ಅಪೀಲನ್ನು ಸಲ್ಲಿಸಬಹುದು.

**6. ಸಮಿತಿಯ ಹಣ, ಮುಂತಾದವುಗಳನ್ನು ಭಾರತದ ಸಂಚಿತ ನಿಧಿಗೆ ಜಮೆ ಮಾಡುವುದು.**- ಗೊತ್ತುಪಡಿಸಲಾದ ದಿನದಂದು ಸಮಿತಿಯ ಜಮೆಯಲ್ಲಿರುವ ಎಲ್ಲ ಹಣಗಳು ಮತ್ತು ನಗದು ಶಿಲ್ಕುಗಳು ಭಾರತ ಸಂಚಿತ ನಿಧಿಯ ಭಾಗವಾಗತಕ್ಕುದು ಮತ್ತು ಅವುಗಳನ್ನು ಅದಕ್ಕೆ ಜಮೆ ಮಾಡತಕ್ಕುದು.

**7. ಸಮಿತಿಯ ಹಾಲಿ ಇರುವ ನೌಕರರ ಸೇವೆಗಳ ವರ್ಗಾವಣೆ.**- (1) ಗೊತ್ತುಪಡಿಸಲಾದ ದಿವಸದ ನಿಕಟಪೂರ್ವದಲ್ಲಿ ಸಮಿತಿಯ ಅಧೀನದಲ್ಲಿ ನಿಯೋಜಿತನಾಗಿರುವ ಪ್ರತಿಯೊಬ್ಬ ವ್ಯಕ್ತಿಯು, ಗೊತ್ತುಪಡಿಸಲಾದ ದಿನದಂದು ಮತ್ತು ಆ ದಿನದಿಂದ ಕೇಂದ್ರ ಸರ್ಕಾರದ ನೌಕರನಾಗತಕ್ಕುದು ಮತ್ತು ಹಾಗೆ ನಿಹಿತಗೊಳಿಸಿರದಿದ್ದರೆ ನಿವೃತ್ತಿ ವೇತನದ, ಉಪದಾನದ ಮತ್ತು ಇತರ ವಿಷಯಗಳ ಬಗ್ಗೆ ಅವನಿಗೆ ದೊರೆಯಬಹುದಾಗಿದ್ದಂಥ ಹಕ್ಕುಗಳು ಮತ್ತು ವಿಶೇಷಾಧಿಕಾರಗಳೊಂದಿಗೆ ಕೇಂದ್ರ ಸರ್ಕಾರದ ಅಧೀನದಲ್ಲಿ ಅವನು ಪದಧಾರಣ ಮಾಡತಕ್ಕುದು ಮತ್ತು ಕೇಂದ್ರ ಸರ್ಕಾರದಲ್ಲಿನ ಅವನ ನಿಯೋಜನೆಯನ್ನು ಕ್ರಮಬದ್ಧವಾಗಿ ಕೊನೆಗೊಳಿಸುವ ಹೊರತು ಮತ್ತು ಕೊನೆಗೊಳಿಸುವವರೆಗೆ ಅಥವಾ ಕೇಂದ್ರ ಸರ್ಕಾರವು ಅವನ ಪರಿಶ್ರಮ ಧನ ಮತ್ತು ಇತರ ಸೇವಾ ಷರತ್ತುಗಳನ್ನು ಕ್ರಮಬದ್ಧವಾಗಿ ವ್ಯತ್ಯಾಸಗೊಳಿಸುವವರೆಗೆ ಅವನು ಹಾಗೆ ಪದಧಾರಣ ಮಾಡುವುದು ಮುಂದುವರೆಯತಕ್ಕುದು.

(2) ಕೈಗಾರಿಕಾ ವಿವಾದಗಳ ಅಧಿನಿಯಮ, 1947 (1947ರ 14)ರಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಸಮಿತಿಯ ಅಧೀನದಲ್ಲಿ ನಿಯೋಜಿತನಾಗಿರುವ ಯಾವನೇ ಅಧಿಕಾರಿಯ ಅಥವಾ ಇತರೆ ವ್ಯಕ್ತಿಯ ಸೇವೆಗಳ ವರ್ಗಾವಣೆಯಿಂದಾಗಿ ಈ ಅಧಿನಿಯಮದ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನು ಮೇರೆಗೆ ಯಾವುದೇ ನಷ್ಟಪರಿಹಾರಕ್ಕೆ ಅಂಥ ಅಧಿಕಾರಿಯು ಅಥವಾ ಇತರ ನೌಕರನು ಹಕ್ಕುಳ್ಳವನಾಗತಕ್ಕುದಲ್ಲ ಮತ್ತು ಯಾವುದೇ ನ್ಯಾಯಾಲಯವು, ನ್ಯಾಯಾಧಿಕರಣವು ಅಥವಾ ಇತರೆ ಪ್ರಾಧಿಕಾರವು ಅಂಥ ಯಾವುದೇ ಕ್ಲೇಮನ್ನು ಪುರಸ್ಕರಿಸತಕ್ಕುದಲ್ಲ.

(3) ಈ ಅಧಿನಿಯಮದ ಉಪಬಂಧಗಳ ಕಾರಣದಿಂದ ಯಾವ ವ್ಯಕ್ತಿಯ ಸೇವೆಯು ಕೇಂದ್ರ ಸರ್ಕಾರಕ್ಕೆ ವರ್ಗಾವಣೆಗೊಂಡಿದೆಯೋ ಆ ಯಾವನೇ ವ್ಯಕ್ತಿಯು ಯಾವುದೇ ಸೇವಾ ಕರಾರಿನ ನಿಬಂಧನೆಗಳ ಮೇರೆಗೆ ಅಥವಾ ಅನ್ಯಥಾ ಸಂಬಳದ ಅಥವಾ ಮಜೂರಿಯ ಯಾವುದೇ ಬಾಕಿಗಳಿಗೆ ಅಥವಾ ಬಳಸದಿರುವ ಯಾವುದೇ ರಜೆಯ ಯಾವುವೇ ಸಂದಾಯಗಳ ಅಥವಾ ಉಪದಾನದ ಅಥವಾ ನಿವೃತ್ತಿ ವೇತನದ ರೂಪದಲ್ಲಿನ ಸಂದಾಯವಾಗಿಲ್ಲದ ಯಾವುದೇ ಇತರೆ ಸಂದಾಯಕ್ಕೆ ಹಕ್ಕುಳ್ಳವನಾಗಿರುವಲ್ಲಿ ಅಂಥ ವ್ಯಕ್ತಿಯು ಕೇಂದ್ರ ಸರ್ಕಾರದ ವಿರುದ್ಧ ತನ್ನ ಕ್ಲೇಮನ್ನು ಜಾರಿಗೊಳಿಸಬಹುದು.

## ಅಧ್ಯಾಯ-III

### ಕೇಂದ್ರ ಸರ್ಕಾರದ ವಿಶೇಷ ಅಧಿಕಾರಗಳು

**8. ಒಪ್ಪಂದದ ಅವಧಿಗೆ ಮುಂಚೆ ಮರು ಸಂದಾಯ ಮಾಡುವಂತೆ ಕೇಳಲು ಕೇಂದ್ರ ಸರ್ಕಾರದ ಅಧಿಕಾರ.**- ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ ಅಥವಾ ಯಾವುದೇ ಒಪ್ಪಂದದಲ್ಲಿ ತದ್ವಿರುದ್ಧವಾದುದು ಏನೇ ಇದ್ದರೂ, ಕೇಂದ್ರ ಸರ್ಕಾರವು, ಲಿಖಿತ ನೋಟೀಸ್ ಮೂಲಕ ಗೊತ್ತುಪಡಿಸಲಾದ ದಿನಕ್ಕೆ ಮುಂಚೆ ಯಾವುದೇ ಕಾಲದಲ್ಲಿ ಯಾವ ಹಡಗಿನ ಒಡೆಯನಿಗೆ ಆರ್ಥಿಕ ಸಹಾಯವನ್ನು ಸಮಿತಿಯು ನೀಡಿದ್ದಿತೋ ಆ ಹಡಗಿನ ಒಡೆಯನನ್ನು,-

(ಎ) ಅಂಥ ಆರ್ಥಿಕ ಸಹಾಯದ ಪ್ರಯೋಜನವನ್ನು ಪಡೆಯುವ ಉದ್ದೇಶಕ್ಕಾಗಿ ಅಥವಾ ಹಾಗೆ ಪಡೆಯುವುದನ್ನು ಮುಂದುವರಿಸುವುದಕ್ಕಾಗಿ ಆ ಹಡಗಿನ ಒಡೆಯನು ಯಾವುದೇ ಮುಖ್ಯ ವಿವರದ ಸಂಬಂಧದಲ್ಲಿ ಸುಳ್ಳು ಅಥವಾ ತಪ್ಪುದಾರಿಗೆ ಎಳೆಯುವಂಥ ಮಾಹಿತಿಯನ್ನು ಕೊಟ್ಟಿದ್ದಾನೆಂದು ಕೇಂದ್ರ ಸರ್ಕಾರಕ್ಕೆ ಕಂಡುಬಂದರೆ; ಅಥವಾ

(ಬಿ) ಆ ಹಡಗಿನ ಒಡೆಯನು ಸಮಿತಿಯೊಂದಿಗೆ ಮಾಡಿಕೊಂಡಿರುವ ಒಪ್ಪಂದದ ನಿಬಂಧನೆಗಳನ್ನು ಪಾಲಿಸುವಲ್ಲಿ ವಿಫಲನಾಗಿದ್ದರೆ; ಅಥವಾ

(ಸಿ) ಆ ಹಡಗಿನ ಒಡೆಯನು ತನ್ನ ಸಾಲಗಳನ್ನು ಸಂದಾಯ ಮಾಡಲು ಅಸಮರ್ಥನಾಗಿದ್ದಾನೆ ಅಥವಾ ಸಮಾಪನೆಯ ಬಗೆಗಿನ ವ್ಯವಹರಣೆಗಳನ್ನು ಆ ಹಡಗಿನ ಒಡೆಯನ ವಿರುದ್ಧ ಪ್ರಾರಂಭಿಸಲಾಗಿದೆಯೆಂಬ ಅಥವಾ ಪ್ರಾರಂಭಿಸಬಹುದೆಂಬ ಯುಕ್ತ ಶಂಕೆ ಇದ್ದರೆ; ಅಥವಾ

(ಡಿ) ಸಮಿತಿಯು ಯಾವ ಉದ್ದೇಶಕ್ಕಾಗಿ ಆರ್ಥಿಕ ಸಹಾಯವನ್ನು ನೀಡಿದ್ದಿತೋ ಅದನ್ನು ಆ ಉದ್ದೇಶಕ್ಕಾಗಿ ಆ ಹಡಗಿನ ಒಡೆಯನು ಕಟ್ಟುನಿಟ್ಟಾಗಿ ಬಳಸಿಲ್ಲ ಅಥವಾ ವಿನಿಯೋಗಿಸಿಲ್ಲವೆಂದು ಅಥವಾ ಅದನ್ನು ಅಕ್ರಮ ಲಾಭಕ್ಕಾಗಿ ಅನ್ಯಥಾ ದುರ್ವಿನಿಯೋಗಿಸಿದ್ದಾನೆಂದು ಅಥವಾ ದುರುಪಯೋಗ ಪಡಿಸಿಕೊಂಡಿದ್ದಾನೆಂದು ನಂಬಲು ಕೇಂದ್ರ ಸರ್ಕಾರಕ್ಕೆ ಕಾರಣವಿದ್ದರೆ; ಅಥವಾ

(ಇ) ಆರ್ಥಿಕ ಸಹಾಯಕ್ಕಾಗಿ ಭದ್ರತೆಯಾಗಿ ಸಮಿತಿಗೆ ಹಸ್ತಾಂತರಗೊಳಿಸಿದ, ಋಣಭಾರಗೊಳಿಸಿದ, ಆಧಾರ ಮಾಡಿದ, ಅಡಮಾನ ಮಾಡಿದ ಅಥವಾ ಅಡವಿಟ್ಟ ಸ್ವತ್ತನ್ನು ಹಡಗಿನ ಒಡೆಯನು ಕೇಂದ್ರ ಸರ್ಕಾರಕ್ಕೆ ಮನದಟ್ಟಾಗುವಂತೆ ವಿಮೆ ಮಾಡಿಸಿರದಿದ್ದರೆ ಅಥವಾ ಮಾಡಿಸಿಟ್ಟಿರದಿದ್ದರೆ ಅಥವಾ ಕೇಂದ್ರ ಸರ್ಕಾರಕ್ಕೆ ಮನದಟ್ಟಾಗುವಂತೆ ಹೆಚ್ಚಿನ ಭದ್ರತೆಯನ್ನು ಕೊಡಬೇಕು ಎನ್ನುವಷ್ಟು ಮಟ್ಟಿಗೆ ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ಅಂಥ ಸ್ವತ್ತಿನ ಮೌಲ್ಯದಲ್ಲಿ ಇಳಿತಾಯವಾಗಿದ್ದರೆ ಮತ್ತು ಅಂಥ ಭದ್ರತೆಯನ್ನು ಕೊಟ್ಟಿರದಿದ್ದರೆ; ಅಥವಾ

(ಎಫ್) ಕೇಂದ್ರ ಸರ್ಕಾರದ ಅನುಮತಿ ಇಲ್ಲದೆ, ಯಾವುದೇ ಹಡಗನ್ನು, ಯಂತ್ರ ಸ್ಥಾವರವನ್ನು ಅಥವಾ ಇತರೆ ಸ್ವತ್ತನ್ನು, ಅದು ಭದ್ರತೆಯ ಭಾಗವಾಗಿರಲಿ ಅಥವಾ ಅನ್ಯಥಾ ಆಗಿರಲಿ, ಅದನ್ನು ಅಂಥ ಹಡಗಿನ ಒಡೆಯನು, ಅದರ ಬದಲಾಗಿ, ಇನ್ನೊಂದನ್ನು ಇಡದೆ ಸ್ಥಳಾಂತರಿಸಿದರೆ; ಅಥವಾ

(ಜಿ) ಯಾವುದೇ ಇತರ ಕಾರಣಕ್ಕಾಗಿ ಕೇಂದ್ರ ಸರ್ಕಾರದ ಹಿತಾಸಕ್ತಿಗಳನ್ನು ಸಂರಕ್ಷಿಸುವುದಕ್ಕಾಗಿ ಅಗತ್ಯಪಡಿಸುವುದು ಅವಶ್ಯವಾಗಿದ್ದರೆ ತನ್ನ ಎಲ್ಲ ಬಾಕಿಗಳನ್ನು ಪೂರ್ಣವಾಗಿ ತಕ್ಷಣವೇ

ತೀರಿಸಲು ಮತ್ತು ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದಂತೆ ಇರುವ ತನ್ನ ಇತರ ಹೊಣೆಗಾರಿಕೆಗಳನ್ನು ಸಹ ತೀರಿಸಲು ಅಗತ್ಯಪಡಿಸಬಹುದು.

**ವಿವರಣೆ:**– ಈ ಅಧಿನಿಯಮದ ಉದ್ದೇಶಕ್ಕಾಗಿ "ಆರ್ಥಿಕ ಸಹಾಯ" ಎಂಬುದು ಗೊತ್ತುಪಡಿಸಲಾದ ದಿನಕ್ಕೆ ಮುಂಚೆ ಯಾವುದೇ ಕಾಲದಲ್ಲಿ ಸಮಿತಿಯು ಹಡಗಿನ ಒಡೆಯನಿಗೆ ನೀಡಿರುವ ಯಾವುದೇ ಖಾತರಿ ಅಥವಾ ಪ್ರತಿ ಖಾತರಿಯೂ ಸೇರಿದಂತೆ ಯಾವುದೇ ಸಾಲವನ್ನು, ಮುಂಗಡವನ್ನು ಅಥವಾ ಹಣಕಾಸಿನ ಸಹಾಯವನ್ನು ಒಳಗೊಳ್ಳತಕ್ಕುದು.

**9. ನ್ಯಾಯಾಲಯದ ಮಧ್ಯಪ್ರವೇಶವಿಲ್ಲದೆ ರಿಸೀವರನ ನೇಮಕ.**– (1) ಕೇಂದ್ರ ಸರ್ಕಾರವು 8ನೇ ಪ್ರಕರಣದ ಮೇರೆಗೆ ನೋಟೀಸನ್ನು ನೀಡಿರುವಲ್ಲಿ ಮತ್ತು ಹಡಗಿನ ಒಡೆಯನು ಅಂಥ ನೋಟೀಸನ್ನು ಪಾಲಿಸಲು ತಪ್ಪಿದಲ್ಲಿ, ಕೇಂದ್ರ ಸರ್ಕಾರವು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನಲ್ಲಿ ಏನೇ ಇದ್ದರೂ ಅಥವಾ ಯಾವುದೇ ಒಪ್ಪಂದದಲ್ಲಿ, ವಿಲೇಖದಲ್ಲಿ ಅಥವಾ ಯಾವುದೇ ಖಾತ್ರಿಯಲ್ಲಿ ಅಥವಾ ಪ್ರತಿಖಾತ್ರಿಯ ಸ್ವರೂಪದಲ್ಲಿ ಇರುವ ಯಾವುದೇ ಇತರ ಲಿಖಿತದಲ್ಲಿ ತದ್ವಿರುದ್ಧವಾದುದು ಏನೇ ಇದ್ದರೂ, ನ್ಯಾಯಾಲಯದ ಮಧ್ಯ ಪ್ರವೇಶವಿಲ್ಲದೆ, ಹಡಗಿನ ಒಡೆಯನಿಗೆ ಸೇರಿದ ಯಾವುದೇ ಹಡಗನ್ನು ಅಥವಾ ಇತರ ಆಸ್ತಿಗಳನ್ನು ಅಡಮಾನ ಮಾಡಿರಲಿ, ಆಧಾರಗೊಳಿಸಿರಲಿ ಅಥವಾ ಋಣಭಾರಗೊಳಿಸಿರಲಿ ಅವುಗಳನ್ನು ತಡೆ ಹಿಡಿಯುವುದಕ್ಕಾಗಿ ಮತ್ತು ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕಾಗಿ ರಿಸೀವರನನ್ನು ನೇಮಕ ಮಾಡಬಹುದು ಮತ್ತು ಅವನು ಈ ಕೆಳಕಂಡ ಅಧಿಕಾರವನ್ನು ಹೊಂದಿರತಕ್ಕುದು–

(i) ಅಧಿನಿಯಮದ 51ನೇ ಪ್ರಕರಣದಲ್ಲಿ ತದ್ವಿರುದ್ಧವಾದುದು ಏನೇ ಇದ್ದರೂ, ಬಹಿರಂಗ ಹರಾಜಿನ ಮೂಲಕ ಅಂಥ ಹಡಗನ್ನು ಅಥವಾ ಇತರೆ ಆಸ್ತಿಗಳನ್ನು ಮಾರುವ ಅಧಿಕಾರ;

(ii) ಯಾವ ಆದಾಯದ ಸಂಬಂಧದಲ್ಲಿ ತನ್ನನ್ನು ಯಾವುದೇ ಅಂಥ ಹಡಗು ಅಥವಾ ಇತರೆ ಆಸ್ತಿಗಳ ರಿಸೀವರನೆಂದು ನೇಮಕ ಮಾಡಲಾಗಿದೆಯೋ ಆ ಎಲ್ಲಾ ಆದಾಯವನ್ನು ತಗಾದೆ ಮಾಡುವ ಮತ್ತು ವಸೂಲಿ ಮಾಡುವ ಮತ್ತು ಅದಕ್ಕೆ ಸಂಬಂಧಿಸಿದ ಬಾಡಿಗೆಗಳನ್ನು, ತೆರಿಗೆಗಳನ್ನು ಮತ್ತು ಇತರ ಬಾಕಿಗಳು ಮತ್ತು ವೆಚ್ಚಗಳನ್ನು ತೀರಿಸಲು ಮತ್ತು ಕೇಂದ್ರ ಸರ್ಕಾರಕ್ಕೆ ಮಾಡಲಾಗಿರುವ ಯಾವುದೇ ಅಡಮಾನದ, ಆಧಾರದ ಅಥವಾ ಋಣಭಾರದ ಮೇರೆಗಿನ ಹಡಗಿನ ಒಡೆಯನ ಹೊಣೆಗಳ ಸಂದಾಯ ಮಾಡಲು ಆ ಆದಾಯವನ್ನು ವಿನಿಯೋಗಿಸುವ ಅಧಿಕಾರ; ಅಥವಾ

(iii) ಆ ಅಡಮಾನದ, ಆಧಾರದ ಅಥವಾ ಋಣಭಾರದ ಮೇರೆಗೆ ಹಡಗಿನ ಒಡೆಯನು ಕೇಂದ್ರ ಸರ್ಕಾರಕ್ಕೆ ತೀರಿಸಬೇಕಾದ ಹೊಣೆಗಾರಿಕೆಗಳನ್ನು ಈಡೇರಿಸುವುದಕ್ಕಾಗಿ ಆದಾಯಗಳು, ಬಾಡಿಗೆಗಳು ಅಥವಾ ಲಾಭಗಳು ಉಂಟಾಗುವಂತೆ ಮಾಡಲು ಅಂಥ ಹಡಗನ್ನು ಅಥವಾ ಇತರ ಆಸ್ತಿಗಳನ್ನು ಉಪಯೋಗಿಸುವ, ಚಾಲನ ಮಾಡುವ, ಬಾಡಿಗೆಗೆ ಕೊಡುವ ಅಥವಾ ಗುತ್ತಿಗೆ ನೀಡುವ ಮತ್ತು ತಾನು ಸ್ವೀಕರಿಸಿರುವ ಹಣದ ಪೈಕಿ ಯಾವುದಾದರೂ ಹಣ ಉಳಿದಿದ್ದರೆ, ಅದನ್ನು ರಿಸೀವರನನ್ನು ನೇಮಕ ಮಾಡಿಲ್ಲದಿದ್ದರೆ, ಯಾವ ಆದಾಯದ ಬಗ್ಗೆ ರಿಸೀವರನನ್ನು ನೇಮಕ ಮಾಡಲಾಗಿದೆಯೋ ಆ ಆದಾಯವನ್ನು ಯಾವ ವ್ಯಕ್ತಿಯು ಸ್ವೀಕರಿಸಲು ಹಕ್ಕುಳ್ಳವನಾಗಬಹುದಾಗಿದ್ದಿತೋ ಅಥವಾ ಯಾವ ವ್ಯಕ್ತಿಯು ಅನ್ಯಥಾ ಅಂಥ ಸ್ವತ್ತಿಗೆ ಹಕ್ಕುಳ್ಳವನಾಗಿರುವನೋ ಆ ವ್ಯಕ್ತಿಗೆ ಸಂದಾಯ ಮಾಡುವ ಅಧಿಕಾರ.

(2) ಈ ಪ್ರಕರಣದ ಮೇರೆಗೆ ನೇಮಕ ಮಾಡಲಾಗಿರುವ ರಿಸೀವರನನ್ನು ಹಡಗಿನ ಒಡೆಯನ ಏಜೆಂಟ್‌ನೆಂದು ಭಾವಿಸತಕ್ಕುದು ಮತ್ತು ಹಡಗಿನ ಒಡೆಯನು ರಿಸೀವರನ ಕೃತ್ಯಗಳಿಗೆ ಅಥವಾ ತಪ್ಪುಗಳಿಗೆ ಕೇಂದ್ರ ಸರ್ಕಾರದ ಕಡೆಯಿಂದ ಯಾವುದೇ ಅನುಚಿತ ಹಸ್ತಕ್ಷೇಪವು ಕಾರಣವಾಗಿರುವ ಹೊರತು ಅಂಥ ಕೃತ್ಯಗಳಿಗೆ ಅಥವಾ ತಪ್ಪುಗಳಿಗೆ ಅವನೊಬ್ಬನೇ ಜವಾಬ್ದಾರನಾಗಿರತಕ್ಕುದು.

**10. ನಿರ್ದೇಶಕರ ಮತ್ತು ಆಡಳಿತಗಾರರ ನೇಮಕ.**- (1) 8ನೇ ಪ್ರಕರಣದ ಮೇರೆಗೆ ನೀಡಲಾದ ನೋಟೀಸಿಗನುಸಾರವಾಗಿ ಹಡಗಿನ ಒಡೆಯನನ್ನು ತನ್ನ ಬಾಕಿಗಳನ್ನು ಮತ್ತು ಹೊಣೆಗಳನ್ನು ತೀರಿಸುವಂತೆ ಕೇಂದ್ರ ಸರ್ಕಾರವು ಅಗತ್ಯಪಡಿಸಿರುವಲ್ಲಿ, ಮತ್ತು ಹಡಗಿನ ಒಡೆಯನು ಅಂಥ ನೋಟೀಸನ್ನು ಪಾಲಿಸಲು ತಪ್ಪಿದಲ್ಲಿ ಕೇಂದ್ರ ಸರ್ಕಾರವು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನಲ್ಲಿ ಏನೇ ಇದ್ದರೂ, ಅಥವಾ ಯಾವುದೇ ಒಪ್ಪಂದದಲ್ಲಿ, ವಿಲೇಖದಲ್ಲಿ ಅಥವಾ ಯಾವುದೇ ಖಾತರಿಯಲ್ಲಿ ಅಥವಾ ಪ್ರತಿ ಖಾತರಿ ಸ್ವರೂಪದ ಯಾವುದೇ ಇತರ ಲಿಖಿತದಲ್ಲಿ ತದ್ವಿರುದ್ಧವಾದದ್ದು ಏನೇ ಇದ್ದರೂ, ಮತ್ತು 9ನೇ ಪ್ರಕರಣದಲ್ಲಿ ಇರುವ ಯಾವುದಕ್ಕೂ ಪ್ರತಿಕೂಲವಾಗದಂತೆ ಅಧಿಸೂಚಿತ ಆದೇಶದ ಮೂಲಕ, ಅದು ಸೂಕ್ತವೆಂದು ಯೋಚಿಸುವಷ್ಟು ಸಂಖ್ಯೆಯ ವ್ಯಕ್ತಿಗಳನ್ನು,-

(ಎ) ಕಂಪನಿಗಳ ಅಧಿನಿಯಮ, 1956 (1956ರ 1)ರಲ್ಲಿ ಪರಿಭಾಷಿಸಿದಂತೆ ಹಡಗಿನ ಒಡೆಯನು ಒಂದು ಕಂಪನಿಯಾಗಿದ್ದರೆ, ಆ ಕಂಪನಿಯ ನಿರ್ದೇಶಕರಾಗಿ, ಅಥವಾ

(ಬಿ) ಯಾವುದೇ ಇತರ ಸಂದರ್ಭದಲ್ಲಿ, ಆ ಹಡಗು ಸಾಗಣೆ ವ್ಯಾಪಾರ ಸಂಸ್ಥೆಯ ಆಡಳಿತಗಾರರಾಗಿ

- ನೇಮಕ ಮಾಡಬಹುದು.

(2) ಈ ಪ್ರಕರಣದ ಮೇರೆಗೆ ನಿರ್ದೇಶಕರನ್ನು ಅಥವಾ ಆಡಳಿತಗಾರರನ್ನು ನೇಮಕ ಮಾಡುವ ಅಧಿಕಾರವು, ಕೇಂದ್ರ ಸರ್ಕಾರವು ಸೂಕ್ತವೆಂದು ಯೋಚಿಸಬಹುದಾದಂಥ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ ಸಂದರ್ಭಾನುಸಾರ ನಿರ್ದೇಶಕರೆಂದು ಅಥವಾ ಆಡಳಿತಗಾರರೆಂದು ಯಾವನೇ ವ್ಯಕ್ತಿಯನ್ನು, ಫರ್ಮ್‌ನ್ನು ಅಥವಾ ನಿಗಮಿತ ನಿಕಾಯವನ್ನು ನೇಮಕ ಮಾಡುವ ಅಧಿಕಾರವನ್ನು ಒಳಗೊಳ್ಳುತ್ತದೆ.

(3) ಸಂದೇಹಗಳ ನಿವಾರಣೆಗಾಗಿ, ನಿರ್ದೇಶಕರನ್ನು ಅಥವಾ ಆಡಳಿತಗಾರರನ್ನು ನೇಮಕ ಮಾಡುವ ಅಧಿಕಾರವು ಹಾಗೆ ನೇಮಕ ಮಾಡಿದ ವ್ಯಕ್ತಿಗಳನ್ನು ತೆಗೆಯುವ ಅಥವಾ ಬದಲಾಯಿಸುವ ಅಧಿಕಾರವನ್ನು ಒಳಗೊಂಡಿದೆ ಎಂದು ಈ ಮೂಲಕ ಘೋಷಿಸಲಾಗಿದೆ.

(4) ಕಂಪನಿಗಳ ಅಧಿನಿಯಮ, 1956 (1956ರ 1) ರಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ಹಡಗಿನ ಒಡೆಯನು ಒಂದು ಕಂಪನಿಯಾಗಿದ್ದರೆ ಅದಕ್ಕೆ ಸಂಬಂಧಿಸಿದ ಯಾವುದೇ ಲಿಖಿತದಲ್ಲಿ ಇರುವುದು ಯಾವುದೂ, ಅದು ಒಬ್ಬ ನಿರ್ದೇಶಕನಿಗೆ ಸಂಬಂಧಪಟ್ಟಂತೆ, ಯಾವುದೇ ಷೇರು ಪಡೆಯುವ ಅರ್ಹತೆಯ, ವಯೋಮಿತಿಯ, ನಿರ್ದೇಶಕರ ಅಥವಾ ನಿರ್ದೇಶಕತ್ವಗಳ ಸಂಖ್ಯೆಯ ಮೇಲೆ ನಿರ್ಬಂಧದ, ಸರದಿಯ ಮೇಲೆ ನಿವೃತ್ತಿಯ ಅಥವಾ ಪದದಿಂದ ತೆಗೆದುಹಾಕುವ ಬಗ್ಗೆ ಅದು ಉಪಬಂಧಿಸುವಷ್ಟರ ಮಟ್ಟಿಗೆ ಕೇಂದ್ರ ಸರ್ಕಾರವು ಈ ಪ್ರಕರಣದ ಮೇರೆಗೆ ನೇಮಕ ಮಾಡಿದ ಯಾವನೇ ನಿರ್ದೇಶಕನಿಗೆ ಅನ್ವಯವಾಗತಕ್ಕುದಲ್ಲ.

**11. ಅಧಿಸೂಚಿತ ಆದೇಶದ ಪರಿಣಾಮ.**- (1) 10ನೇ ಪ್ರಕರಣದ ಮೇರೆಗೆ ಅಧಿಸೂಚಿತ ಆದೇಶವನ್ನು ಹೊರಡಿಸಿದ ಮೇಲೆ-

(ಎ) ಕಂಪನಿಗಳ ಅಧಿನಿಯಮ, 1956 (1956ರ 1)ರಲ್ಲಿ ಪರಿಭಾಷಿಸಿದಂತೆ ಹಡಗಿನ ಒಡೆಯನು ಒಂದು ಕಂಪನಿಯಾಗಿದ್ದರೆ, ಆ ಹಡಗಿನ ಒಡೆಯನ ನಿರ್ದೇಶಕರೆಂದು ಪದಧಾರಣ ಮಾಡಿರುವ ಎಲ್ಲ ವ್ಯಕ್ತಿಗಳು ಮತ್ತು ಯಾವುದೇ ಇತರ ಸಂದರ್ಭದಲ್ಲಿ, ಅಧಿಸೂಚಿತ ಆದೇಶವನ್ನು ಹೊರಡಿಸಿದ ನಿಕಟಪೂರ್ವದಲ್ಲಿ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣದ ಅಧಿಕಾರಗಳೊಂದಿಗೆ ಯಾವುದೇ ಪದಧಾರಣ ಮಾಡಿರುವ ಎಲ್ಲ ವ್ಯಕ್ತಿಗಳು ಅಂಥ ತಮ್ಮ ಪದಗಳನ್ನು ತೆರವು ಮಾಡಿದ್ದಾರೆಂದು ಭಾವಿಸತಕ್ಕುದು.

(ಬಿ) ಹಡಗಿನ ಒಡೆಯ ಮತ್ತು ಅಧಿಸೂಚಿತ ಆದೇಶವನ್ನು ಹೊರಡಿಸಿದ ನಿಕಟ ಪೂರ್ವದಲ್ಲಿ ಅಂಥ ಪದಧಾರಣ ಮಾಡಿರುವ (ಎ) ಖಂಡದಲ್ಲಿ ಉಲ್ಲೇಖಿಸಿದ ಯಾವನೇ ನಿರ್ದೇಶಕ

ಅಥವಾ ವ್ಯಕ್ತಿ ಇವರ ನಡುವಣ ವ್ಯವಸ್ಥಾಪನೆಯ ಯಾವುದೇ ಕರಾರನ್ನು ಕೊನೆಗೊಳಿಸಲಾಗಿದೆ ಎಂದು ಭಾವಿಸತಕ್ಕುದು.

(2) 10ನೇ ಪ್ರಕರಣದ ಮೇರೆಗೆ ನೇಮಕಗೊಂಡ ನಿರ್ದೇಶಕರು ಅಥವಾ ಆಡಳಿತಗಾರರು ಹಡಗಿನ ಒಡೆಯನು ಹಕ್ಕುಳ್ಳವನಾಗಿರುವಂಥ ಅಥವಾ ಹಕ್ಕುಳ್ಳವನಾಗಿರುವನೆಂದು ಕಂಡುಬರುವಂಥ ಸ್ವತ್ತುಗಳನ್ನು, ಸಾಮಾನುಗಳನ್ನು, ಮತ್ತು ಕ್ರಮಾರ್ಹ ಕ್ಲೇಮುಗಳನ್ನು ತಮ್ಮ ಅಭಿರಕ್ಷೆಗೆ ಅಥವಾ ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಅವಶ್ಯವಿರಬಹುದಾದಂಥ ಕ್ರಮಗಳನ್ನು ತೆಗೆದುಕೊಳ್ಳತಕ್ಕುದು ಮತ್ತು ಹಡಗಿನ ಒಡೆಯನ ಎಲ್ಲ ಸ್ವತ್ತು ಮತ್ತು ಸಾಮಾನುಗಳು ಅಧಿಸೂಚಿತ ಆದೇಶದ ದಿನಾಂಕದ ಲಾಗಾಯಿತು ಸಂದರ್ಭಾನುಸಾರ ನಿರ್ದೇಶಕರ ಅಥವಾ ಆಡಳಿತಗಾರರ ಅಭಿರಕ್ಷೆಯಲ್ಲಿರುವುದಾಗಿ ಭಾವಿಸತಕ್ಕುದು.

(3) ಈ ಅಧಿನಿಯಮದ ಇತರ ಉಪಬಂಧಗಳಿಗೊಳಪಟ್ಟು, 10ನೇ ಪ್ರಕರಣದ ಮೇರೆಗೆ ನೇಮಕಗೊಂಡ ನಿರ್ದೇಶಕರು, ಎಲ್ಲ ಉದ್ದೇಶಗಳಿಗಾಗಿ, ಕಂಪನಿಗಳ ಅಧಿನಿಯಮ, 1956 (1956ರ 1) ರ ಮೇರೆಗೆ ಕ್ರಮಬದ್ಧವಾಗಿ ರಚಿತವಾದಂಥ ಕಂಪನಿಯ ನಿರ್ದೇಶಕರಾಗಿರತಕ್ಕುದು ಮತ್ತು ಅಂಥ ನಿರ್ದೇಶಕರು ಮಾತ್ರವೇ ಅಂಥ ನಿರ್ದೇಶಕರ ಎಲ್ಲ ಅಧಿಕಾರಗಳನ್ನು ಚಲಾಯಿಸಲು ಹಕ್ಕುಳ್ಳವರಾಗಿರತಕ್ಕುದು.

**12. ನಿರ್ದೇಶಕರ ಮತ್ತು ಆಡಳಿತಗಾರರ ಅಧಿಕಾರಗಳು ಮತ್ತು ಕರ್ತವ್ಯಗಳು.**- ಕೇಂದ್ರ ಸರ್ಕಾರದ ನಿಯಂತ್ರಣಕ್ಕೊಳಪಟ್ಟು 10ನೇ ಪ್ರಕರಣದ ಮೇರೆಗೆ ನೇಮಕಗೊಂಡ ನಿರ್ದೇಶಕರು ಅಥವಾ, ಸಂದರ್ಭಾನುಸಾರ, ಆಡಳಿತಗಾರರು ಹಡಗಿನ ಒಡೆಯನ ವ್ಯವಹಾರವನ್ನು ದಕ್ಷ ರೀತಿಯಲ್ಲಿ ನಿರ್ವಹಿಸುವ ಉದ್ದೇಶಕ್ಕಾಗಿ ಅವಶ್ಯವಾಗಬಹುದಾದಂಥ ಕ್ರಮಗಳನ್ನು ತೆಗೆದುಕೊಳ್ಳತಕ್ಕುದು ಮತ್ತು ಸದರಿ ವ್ಯವಹಾರದ ನಿರ್ವಹಣೆಯ ಪ್ರಭಾರದಲ್ಲಿರುವ ವ್ಯಕ್ತಿಗಳು ಚಲಾಯಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕುದು ಮತ್ತು ಅಂಥ ಕರ್ತವ್ಯಗಳನ್ನು ನೆರವೇರಿಸತಕ್ಕುದು.

**13. ವ್ಯವಸ್ಥಾಪನಾ ಕರಾರು ಮುಂತಾದವುಗಳನ್ನು ಕೊನೆಗೊಳಿಸಿದ್ದಕ್ಕಾಗಿ ನಷ್ಟ ಪರಿಹಾರದ ಹಕ್ಕು ಇರುವುದಿಲ್ಲ:-** (1) ಯಾವುದೇ ಕರಾರಿನಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ತದ್ವಿರುದ್ಧವಾದುದು ಏನೇ ಇದ್ದರೂ, ಯಾವನೇ ವ್ಯವಸ್ಥಾಪಕ ನಿರ್ದೇಶಕನು ಅಥವಾ ಪೂರ್ಣಾವಧಿ ನಿರ್ದೇಶಕನು ಅಥವಾ ಯಾವನೇ ಇತರ ನಿರ್ದೇಶಕನು ಅಥವಾ ವ್ಯವಸ್ಥಾಪಕನು ಅಥವಾ ಕಂಪನಿಯಾಗಿರುವ ಹಡಗಿನ ಒಡೆಯನ ವ್ಯವಸ್ಥಾಪನೆಯ ಪ್ರಭಾರದಲ್ಲಿರುವ ಯಾವನೇ ವ್ಯಕ್ತಿಯು ಈ ಅಧಿನಿಯಮದ ಮೇರೆಗೆ ಹುದ್ದೆಯನ್ನು ಕಳೆದುಕೊಂಡಿದ್ದಕ್ಕೆ ಅಥವಾ ತಾನು ಅಂಥ ಕಂಪನಿಯೊಂದಿಗೆ ಮಾಡಿಕೊಂಡಿರುವ ವ್ಯವಸ್ಥಾಪನೆಯ ಯಾವುದೇ ಕರಾರನ್ನು ಅಕಾಲಿಕವಾಗಿ ಕೊನೆಗೊಳಿಸಿದ್ದಕ್ಕಾಗಿ ಯಾವುದೇ ನಷ್ಟ ಪರಿಹಾರಕ್ಕೆ ಹಕ್ಕುಳ್ಳವನಾಗತಕ್ಕುದಲ್ಲ.

(2) (1)ನೇ ಉಪ-ಪ್ರಕರಣದಲ್ಲಿ ಇರುವ ಯಾವುದೂ, ಅಂಥ ನಷ್ಟಪರಿಹಾರದ ರೂಪದಲ್ಲಲ್ಲದೆ ಅನ್ಯಥಾ ವಸೂಲೀಯವಾದ ಹಣವನ್ನು ಹಡಗಿನ ಒಡೆಯನಿಂದ ವಸೂಲಿ ಮಾಡುವ ಬಗ್ಗೆ ಯಾವನೇ ಅಂಥ ವ್ಯವಸ್ಥಾಪಕ ನಿರ್ದೇಶಕನಿಗೆ ಅಥವಾ ಪೂರ್ಣಾವಧಿ ನಿರ್ದೇಶಕನಿಗೆ, ಅಥವಾ ಯಾವನೇ ಇತರ ನಿರ್ದೇಶಕನಿಗೆ ಅಥವಾ ವ್ಯವಸ್ಥಾಪಕನಿಗೆ ಅಥವಾ ವ್ಯವಸ್ಥಾಪನೆಯ ಪ್ರಭಾರದಲ್ಲಿರುವ ಯಾವನೇ ಅಂಥ ವ್ಯಕ್ತಿಗೆ ಇರುವ ಹಕ್ಕಿಗೆ ಬಾಧಕವಾಗತಕ್ಕುದಲ್ಲ.

**14. 1956ರ 1ನೇ ಅಧಿನಿಯಮದ ಅನ್ವಯ.**- (1) ಒಂದು ಕಂಪನಿಗೆ ಸಂಬಂಧಿಸಿದಂತೆ 10ನೇ ಪ್ರಕರಣದ ಮೇರೆಗೆ ನಿರ್ದೇಶಕರನ್ನು ನೇಮಕ ಮಾಡಿರುವಲ್ಲಿ ಆಗ, ಕಂಪನಿಗಳ ಅಧಿನಿಯಮ, 1956ರಲ್ಲಿ ಅಥವಾ ಅಂಥ ಕಂಪನಿಯ ಸ್ಥಾಪನಾ ವಿವರಣ ಪತ್ರದಲ್ಲಿ ಅಥವಾ ಅಂತರ ನಿಯಮಾವಳಿಗಳಲ್ಲಿ ಏನೇ ಇದ್ದರೂ,-

(ಎ) ಅಂಥ ಕಂಪನಿಯ ಷೇರುದಾರರು ಅಥವಾ ಯಾವನೇ ಇತರ ವ್ಯಕ್ತಿಯು ಯಾವನೇ ವ್ಯಕ್ತಿಯನ್ನು ಆ ಕಂಪನಿಯ ನಿರ್ದೇಶಕನೆಂದು ನಾಮ ನಿರ್ದೇಶನ ಮಾಡುವುದು ಅಥವಾ ನೇಮಕ ಮಾಡುವುದು ಕಾನೂನು ಬದ್ಧವಾಗತಕ್ಕುದಲ್ಲ;

(ಬಿ) ಅಂಥ ಕಂಪನಿಯ ಷೇರುದಾರರ ಯಾವುದೇ ಸಭೆಯಲ್ಲಿ ಅಂಗೀಕರಿಸಿದ ಯಾವುದೇ ನಿರ್ಣಯವನ್ನು ಕೇಂದ್ರ ಸರ್ಕಾರವು ಅನುಮೋದಿಸಿರುವ ಹೊರತು ಅದನ್ನು ಜಾರಿಗೊಳಿಸತಕ್ಕುದಲ್ಲ

(ಸಿ) ಕೇಂದ್ರ ಸರ್ಕಾರದ ಸಮ್ಮತಿಯಿಂದ ಹೊರತು, ಅಂಥ ಕಂಪನಿಯ ಸಮಾಪನಕ್ಕಾಗಿ ಅಥವಾ ಅದರ ಸಂಬಂಧದಲ್ಲಿ ಒಬ್ಬ ರಿಸೀವರನನ್ನು ನೇಮಕ ಮಾಡುವುದಕ್ಕಾಗಿ ಯಾವುದೇ ನ್ಯಾಯಾಲಯದಲ್ಲಿ ಯಾವುದೇ ವ್ಯವಹರಣೆಯನ್ನು ಹೂಡತಕ್ಕುದಲ್ಲ ಅಥವಾ ಮುಂದುವರಿಸತಕ್ಕುದಲ್ಲ.

(2) ಈ ಅಧಿನಿಯಮದ ಇತರ ಉಪಬಂಧಗಳಿಗೊಳಪಟ್ಟು ಮತ್ತು ಕೇಂದ್ರ ಸರ್ಕಾರವು, ಈ ಬಗ್ಗೆ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಅಪವಾದಗಳು, ನಿರ್ಬಂಧಗಳು ಮತ್ತು ಪರಿಮಿತಿಗಳು, ಯಾವುದಾದರೂ ಇದ್ದರೆ, ಅವುಗಳಿಗೊಳಪಟ್ಟು, ಕಂಪನಿಗಳ ಅಧಿನಿಯಮ, 1956 (1956ರ 1) ಇದು 10ನೇ ಪ್ರಕರಣದ ಮೇರೆಗೆ ಅಧಿಸೂಚಿತ ಆದೇಶವನ್ನು ಹೊರಡಿಸುವುದಕ್ಕೆ ಮುಂಚೆ ಕಂಪನಿಯಾಗಿರುವ ಹಡಗಿನ ಒಡೆಯನಿಗೆ ಅನ್ವಯವಾಗುತ್ತಿದ್ದಂಥ ರೀತಿಯಲ್ಲಿಯೇ ಆ ಹಡಗಿನ ಒಡೆಯನಿಗೆ ಅನ್ವಯವಾಗುವುದು ಮುಂದುವರಿಯತಕ್ಕುದು.

**15. ಬಾಕಿಗಳನ್ನು ಭೂಕಂದಾಯದ ಬಾಕಿಯಂತೆ ವಸೂಲಿ ಮಾಡುವುದು.**- (1) 8ನೇ ಪ್ರಕರಣದ ಮೇರೆಗೆ ಹೊರಡಿಸಿದ ನೋಟೀಸಿಗೆ ಅನುಸಾರವಾಗಿ ಹಡಗಿನ ಒಡೆಯನು ಕೇಂದ್ರ ಸರ್ಕಾರಕ್ಕೆ ಸಂದಾಯ ಮಾಡಬೇಕಾದ ಯಾವುದೇ ಮೊಬಲಗನ್ನು ಭೂಕಂದಾಯದ ಬಾಕಿಯನ್ನು ವಸೂಲು ಮಾಡುವಂಥದೇ ರೀತಿಯಲ್ಲಿ ವಸೂಲು ಮಾಡತಕ್ಕುದು.

(2) ಕೇಂದ್ರ ಸರ್ಕಾರವು (1)ನೇ ಉಪ-ಪ್ರಕರಣದ ಉದ್ದೇಶಗಳಿಗಾಗಿ ಅಂಥ ಹಡಗಿನ ಒಡೆಯನಿಂದ ಬರಬೇಕಾದ ಬಾಕಿಯ ಮೊಬಲಗನ್ನು ನಿರ್ದಿಷ್ಟಪಡಿಸಿ ಪ್ರಮಾಣಪತ್ರವನ್ನು ತಯಾರಿಸುವುದಕ್ಕೆ ಒಬ್ಬ ಅಧಿಕಾರಿಯನ್ನು ನೇಮಕ ಮಾಡಬಹುದು ಮತ್ತು ಆ ಹಡಗಿನ ಒಡೆಯನು ಯಾವ ಜಿಲ್ಲೆಯಲ್ಲಿ ಯಾವುದೇ ಸ್ವತ್ತಿನ ಒಡೆತನವನ್ನು ಹೊಂದಿರುವನೋ ಅಥವಾ ವ್ಯವಹಾರ ನಡೆಸುತ್ತಿರುವನೋ ಆ ಜಿಲ್ಲೆಯ ಜಿಲ್ಲಾಧಿಕಾರಿಗೆ ಅದನ್ನು ಕಳಿಸಬಹುದು, ಪರಂತು ಹಾಗೆ ನೇಮಕಗೊಂಡ ಅಧಿಕಾರಿಯು ಆ ಪ್ರಮಾಣಪತ್ರವನ್ನು ಜಿಲ್ಲಾಧಿಕಾರಿಗೆ ಕಳುಹಿಸುವುದಕ್ಕೆ ಮುಂಚೆ ಆ ಹಡಗಿನ ಒಡೆಯನಿಗೆ ಅಹವಾಲು ಹೇಳಿಕೊಳ್ಳಲು ಅವಕಾಶವನ್ನು ನೀಡತಕ್ಕುದು.

(3) ಜಿಲ್ಲಾಧಿಕಾರಿಯು, ಅಂಥ ಪ್ರಮಾಣ ಪತ್ರವನ್ನು ಸ್ವೀಕರಿಸಿದ ತರುವಾಯ ಆ ಪ್ರಮಾಣ ಪತ್ರದಲ್ಲಿ ನಿರ್ದಿಷ್ಟಪಡಿಸಿರುವ ಮೊಬಲಗನ್ನು ಅಂಥ ಹಡಗಿನ ಒಡೆಯನಿಂದ ವಸೂಲು ಮಾಡಲು ಕ್ರಮ ಜರುಗಿಸತಕ್ಕುದು.

**16. ಹೆಸರಿಸಲಾದ ವ್ಯಕ್ತಿಗೆ ಅಧಿಕಾರಗಳ ಪ್ರತ್ಯಾಯೋಜನೆ:**- (1) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಮತ್ತು ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ, ನಿರ್ಬಂಧಗಳಿಗೆ ಮತ್ತು ಪರಿಮಿತಿಗಳಿಗೆ ಒಳಪಟ್ಟು ಅಥವಾ ಅನ್ಯಥಾ, ಹೆಸರಿಸಲಾದ ವ್ಯಕ್ತಿಗೆ ಈ ಅಧಿನಿಯಮದ ಮೇರೆಗಿನ ತನ್ನ ಎಲ್ಲ ಅಥವಾ ಯಾವುದೇ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಪ್ರತ್ಯಾಯೋಜಿಸಬಹುದು.

(2) (1)ನೇ ಉಪ-ಪ್ರಕರಣದ ಮೇರೆಗೆ ಯಾವುದೇ ಅಧಿಸೂಚನೆಯನ್ನು ಹೊರಡಿಸಿರುವಲ್ಲಿ ಈ ಅಧಿನಿಯಮದ ಉಪಬಂಧಗಳು ಯಾವ ವಿಷಯದ ಸಂಬಂಧದಲ್ಲಿ ಕೇಂದ್ರ ಸರ್ಕಾರದ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಹೆಸರಿಸಲಾದ ವ್ಯಕ್ತಿಗೆ ಪ್ರತ್ಯಾಯೋಜಿಸಲಾಗಿದೆಯೋ ಆ ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರದ ಸಂಬಂಧದಲ್ಲಿ ಅನ್ವಯವಾಗುವಂತೆಯೇ ಅವು ಹೆಸರಿಸಲಾದ ವ್ಯಕ್ತಿಯ ಸಂಬಂಧದಲ್ಲಿ ಅನ್ವಯವಾಗತಕ್ಕುದು.

## ಅಧ್ಯಾಯ–IV

### ಸಂಕೀರ್ಣ

**17. ಇತರೆ ಕಾನೂನುಗಳ ಮೇಲೆ ಅಧಿನಿಯಮದ ಪರಿಣಾಮ.**– ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನಲ್ಲಿ ಅಥವಾ ಹಡಗಿನ ಒಡೆಯನಾಗಿರುವ ಯಾವುದೇ ಕಂಪನಿಯ ಸ್ಥಾಪನಾ ವಿವರಣ ಪತ್ರ ಅಥವಾ ಅಂತರ ನಿಯಮಾವಳಿಯಲ್ಲಿ ಅಥವಾ ಈ ಅಧಿನಿಯಮದ ಹೊರತು ಯಾವುದೇ ಇತರ ಕಾನೂನಿನ ಕಾರಣದಿಂದಾಗಿ ಪರಿಣಾಮ ಹೊಂದಿರುವ ಯಾವುದೇ ಒಪ್ಪಂದದಲ್ಲಿ, ವಿಲೇಖದಲ್ಲಿ ಅಥವಾ ಇತರ ಲಿಖಿತದಲ್ಲಿ ಈ ಅಧಿನಿಯಮಕ್ಕೆ ಅಸಂಗತವಾದುದು ಏನೇ ಇದ್ದರೂ, ಈ ಅಧಿನಿಯಮದ ಉಪಬಂಧಗಳು ಪರಿಣಾಮಕಾರಿಯಾಗತಕ್ಕುದು.

**18. ಸದ್ಭಾವನೆಯಿಂದ ತೆಗೆದುಕೊಂಡ ಕ್ರಮದ ಸಂರಕ್ಷಣೆ.**– ಕೇಂದ್ರ ಸರ್ಕಾರದ ವಿರುದ್ಧ ಅಥವಾ ಕೇಂದ್ರ ಸರ್ಕಾರದಿಂದ ನೇಮಕಗೊಂಡ ಯಾವನೇ ನಿರ್ದೇಶಕನ ಅಥವಾ ಆಡಳಿತಗಾರನ ಅಥವಾ ಕೇಂದ್ರ ಸರ್ಕಾರದ ಯಾವನೇ ಹೆಸರಿಸಲಾದ ವ್ಯಕ್ತಿಯ ಅಥವಾ ಯಾವನೇ ಅಧಿಕಾರಿಯ ಅಥವಾ ಇತರ ನೌಕರನ ಅಥವಾ ಹೆಸರಿಸಲಾದ ವ್ಯಕ್ತಿಯ ವಿರುದ್ಧ ಈ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಅಥವಾ ಕಾನೂನಿನ ಬಲವನ್ನು ಹೊಂದಿರುವ ಯಾವುದೇ ಉಪಬಂಧದ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದಿಂದ ಉಂಟಾದ ಅಥವಾ ಉಂಟಾಗುವ ಸಂಭವವಿರುವ ಯಾವುದೇ ನಷ್ಟದ ಅಥವಾ ಹಾನಿಯ ಬಗ್ಗೆ ಯಾವುದೇ ದಾವೆಯನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕುದಲ್ಲ.

**19. ನಿರ್ದೇಶಕರು ಮುಂತಾದವರಿಗೆ ನಷ್ಟ ಭರ್ತಿ.**– 10ನೇ ಪ್ರಕರಣದ ಮೇರೆಗೆ ನೇಮಕಗೊಂಡ ಪ್ರತಿಯೊಬ್ಬ ನಿರ್ದೇಶಕ ಅಥವಾ ಆಡಳಿತಗಾರ ಮತ್ತು 16ನೇ ಪ್ರಕರಣದ ಮೇರೆಗೆ ನೇಮಕಗೊಂಡ ಹೆಸರಿಸಲಾದ ವ್ಯಕ್ತಿ ಇವರ ಸ್ವಂತ ಉದ್ದೇಶಪೂರ್ವಕವಾದ ಕೃತ್ಯದ ಅಥವಾ ತಪ್ಪಿನ ಮೂಲಕ ಉಂಟಾಗಿರುವಂಥ ನಷ್ಟಗಳನ್ನು ಮತ್ತು ವೆಚ್ಚಗಳನ್ನು ಹೊರತುಪಡಿಸಿ ಇವರ ಕರ್ತವ್ಯಗಳ ನಿರ್ವಹಣೆಯ ಸಂಬಂಧದಲ್ಲಿ ಇವರು ವಹಿಸಿದ ಎಲ್ಲ ನಷ್ಟಗಳನ್ನು ಮತ್ತು ವೆಚ್ಚಗಳನ್ನು ಕೇಂದ್ರ ಸರ್ಕಾರವು ಇವರಿಗೆ ನಷ್ಟಭರ್ತಿ ಮಾಡಿಕೊಡತಕ್ಕುದು.

**20. ನಿರ್ದೇಶಕರು, ಮುಂತಾದವರು ಲೋಕ ನೌಕರರಾಗಿರುವುದು.**– 10ನೇ ಪ್ರಕರಣದ ಮೇರೆಗೆ ನೇಮಕಗೊಂಡ ಪ್ರತಿಯೊಬ್ಬ ನಿರ್ದೇಶಕನು ಅಥವಾ ಆಡಳಿತಗಾರನು ಮತ್ತು 16ನೇ ಪ್ರಕರಣದ ಮೇರೆಗೆ ನೇಮಕಗೊಂಡ ಹೆಸರಿಸಲಾದ ವ್ಯಕ್ತಿಯು ಭಾರತ ದಂಡಸಂಹಿತೆ (1860ರ 45) ಯ 21ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ಲೋಕ ನೌಕರರಾಗಿರುವುದಾಗಿ ಭಾವಿಸತಕ್ಕುದು.

* * * * *